ಮಂತ್ರಿಗಳೇ ಈ ಒಂದು ಇಲಾಖೆಯನ್ನು ವಹಿಸಿಕೊಂಡಿದ್ದು ಇವರು ತರುಣರ ಒಂದು ಉನ್ನತಿಗಾದರೂ ರಾಜ್ಯದಲ್ಲಿ ಇನ್ನೂ ೪-೬ ಸರ್ಕಾರಿ ಕಾಲೇಜುಗಳನ್ನು ಈ ಬಗ್ಗೆ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಪಿ. ಟಿ. ಆರ್. ಸಿಂಧ್ಯಾ.—ಸದ್ಯದಲ್ಲಿ ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಸದ್ಯದಲ್ಲಿ ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಆಗುವುದಿಲ್ಲ. ಈಗ ಇರತಕ್ಕ ಸರ್ಕಾರಿ ಕಾಲೆಜಿನಲ್ಲಿ ಮೆರಿಟ್ ಮೂಲಕ ಬರತಕ್ಕ ವಿದ್ಯಾರ್ಥಿಗಳಿಗೆ ಈ ವರ್ಷ ಹೆಚ್ಚಿನ ಸೀಟುಗಳನ್ನು ಮಾಡಿದ್ದೇವೆ. ಈಗ ಇರತಕ್ಕ ಇನ್‌ಫ್ರಾಸ್ಟ್ರಕ್ಚರ್ ಮತ್ತು ಫೆಸಿಲಿಟೀಸ್ ಮೂಲಕ ಮತ್ತಷ್ಟು ಸೀಟುಗಳನ್ನು ಹೆಚ್ಚು ಮಾಡಬಹುದೆಂದು ಹೇಳಿದ್ದಾರೆ. ಮುಂದಿನ ವರ್ಷ ಮತ್ತಷ್ಟು ಸೀಟುಗಳನ್ನು ಹೆಚ್ಚು ಮಾಡಬಹುದು.

ಒಬ್ಬ ಮಾನ್ಯ ಸದಸ್ಯರು.—ಕ್ಯಾಪಿಟೇಷನ್ ಶುಲ್ಕವನ್ನು ರದ್ದುಪಡಿಸಲಿಕ್ಕೆ ಸರ್ಕಾರ ಕಾರ್ಯ ಕ್ರಮವನ್ನು ಹಾಕಿಕೊಳ್ಳುತ್ತದೆಯೇ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೆ, ಈ ಪ್ರಶ್ನೆ ಪ್ರತ್ಯೇಕವಾಗುತ್ತದೆ, ಈಗ ಇರತಕ್ಕ ಪ್ರಶ್ನೆ ಡಿ ಮತ್ತು ಎಂ ಫಾರ್ಮಾಗಳಿಗೆ ಸಂಬಂಧಪಟ್ಟಿದ್ದು. ರಾಜ್ಯದಲ್ಲಿ ಇಂಜಿನಿಯರಿಂಗ್, ಮೆಡಿಕಲ್, ಬಿ ಫಾರ್ಮಾ ಇವುಗಳಿಗೆಲ್ಲಾ ಸಂಬಂಧಪಟ್ಟಂತೆ ಶಿಕ್ಷಣ ಮಸೂದೆ ನಮ್ಮ ಮುಂದೆ ಬರುತ್ತಿರುವುದರಿಂದ ಅದಕ್ಕೆ ಉತ್ತರ ಆಗತ್ಯವಿಲ್ಲ.

ಗಂಗೊಳ್ಳಿಯ ಮೀನುಗಾರಿಕಾ ಬಂದರಲ್ಲಿ ಹೂಳೆತ್ತುವ ಬಗ್ಗೆ

೧೪೦ (೨೮೮) ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮೀನುಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಗಂಗೊಳ್ಳಿಯಲ್ಲಿ ಮೀನುಗಾರಿಕಾ ಬಂದರಿರುವುದು ಸರಕಾರಕ್ಕೆ ಗೊತ್ತಿದೆಯೇ?

ಆ) ಮೀನುಗಾರರು ಗಂಗೊಳ್ಳಿಯಲ್ಲಿ ಹೂಳೆತ್ತುವ ಬಗ್ಗೆ ಮನವಿಯನ್ನು ಕಳುಹಿಸಿದ್ದು ನಿಜವೆ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರಕಾರದವರು ಯಾವ ಕ್ರಮವನ್ನು ಕೈಗೊಂಡಿದ್ದಾರೆ?

ಶ್ರೀ ರಾಜವರ್ಧನ್ (ಮೀನುಗಾರಿಕಾ ರಾಜ್ಯ ಸಚಿವರು).—

ಅ) ಗಂಗೊಳ್ಳಿಯ ಮೀನುಗಾರಿಕಾ ಕೇಂದ್ರವು ಪೂರ್ಣ ಪ್ರಮಾಣದ ಮೀನುಗಾರಿಕಾ ಬಂದರಲ್ಲ. ಅಲ್ಲಿರುವ ವ್ಯವಸ್ಥೆಯು ಮೀನುಗಾರಿಕಾ ದೋಣಿಗಳಿಂದ ಮೀನನ್ನು ಇಳಿಸಲು ಬೇಕಾಗುವ ಇಳಿಕಟ್ಟೆ (JETTY) ಪೌರೈಕೆ ಮತ್ತು ಅದಕ್ಕೆ ಸಂಬಂಧಪಟ್ಟ ಹರಾಜು ಮಳಿಗೆಯನ್ನು ಹೊಂದಿದೆ.

ಆ) ಹೌದು.

ಇ) ಹೂಳೆತ್ತುವುದು ಒಂದು ತಾತ್ಕಾಲಿಕ ಪರಿಹಾರ ಮಾತ್ರ. ಆ ಪ್ರಯುಕ್ತ, ಶಾಶ್ವತವಾಗಿ ತಡೆಗೋಡೆ (ಟ್ರೈನಿಂಗ್ ವಾಲ್ಸ್) ಹಾಕುವ ಬಗ್ಗೆ ಸಂಶೋಧನೆಯನ್ನು ನಡೆಸಲು ಕೃಷ್ಣರಾಜ ಸಾಗರದ ಕರ್ನಾಟಕ ತಾಂತ್ರಿಕ ಸಂಶೋಧನಾ ವಿಭಾಗಕ್ಕೆ ಒಪ್ಪಿಸಲಾಗಿದ್ದು, ಆ ಬಗ್ಗೆ ಪ್ರಯೋಗಗಳು ಮುಂದುವರಿಯುತ್ತಿದ್ದು, ಅವುಗಳ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಕರ್ನಾಟಕದ ಕರಾವಳಿಯಲ್ಲಿ ಈ ದಿನಕ್ಕೆ ಹೂಳೆತ್ತುವ ಬಗ್ಗೆ ಅನೇಕ ಮನವಿಗಳು ಬಂದಿವೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದೀರಿ. ಕರ್ನಾಟಕದ ಕರಾವಳಿಯಲ್ಲಿ ಹೂಳು ಎತ್ತುವ ಕಾರ್ಯ ಮಾಡಿದ್ದೀರಾ? ಮಾಡಿದ್ದರೆ ಗಂಗೊಳ್ಳಿಯಲ್ಲಿ ತಾತ್ಕಾಲಿಕ ಪರಿಹಾರ ಕಾರ್ಯ ಮಾಡದೇ ಇರುವುದಕ್ಕೆ ಕಾರಣ ಏನು?

ಶ್ರೀ ರಾಜವರ್ಧನ್.—ಹೂಳು ಎತ್ತುವ ಬಗ್ಗೆ ಕರ್ನಾಟಕದ ಎಲ್ಲಾ ಕರಾವಳಿ ಪ್ರದೇಶಗಳಿಂದಲೂ ಮನವಿಗಳು ಬಂದಿವೆ. ಆದರೆ, ಈ ತಾತ್ಕಾಲಿಕ ಕಾರ್ಯಕ್ರಮ ಒಂದು ವಾರ ಆಗಬಹುದು, ಮೂರು

ತಿಂಗಳು ಆಗಬಹುದು, ಆರು ತಿಂಗಳು ಆಗಬಹುದು, ಇದು ಶಾಶ್ವತವಾದ ಪರಿಹಾರವಲ್ಲ. ಇದರ ಬಗ್ಗೆ ಶಾಶ್ವತವಾಗಿ ಮಾಡಬೆ ಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕಾಗುತ್ತದೆ. ಆದಕ್ಕಾಗಿ ಸಂಶೊ ಧನೆ ಮಾಡಲಿಕ್ಕೆ ತಾಂತ್ರಿಕರಿಗೆ ರೆಫರ್ ಮಾಡಿದ್ದೆವೆ. ಆದರ ವರದಿ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪ್ರತಾಪ ಚಂದ್ರಶೆಟ್ಟಿ.—ಕರ್ನಾಟಕದ ಕರಾವಳಿಯಲ್ಲಿ ಬೇರೆ ಕಡೆ ಎಲ್ಲಿಯಾದರೂ ತಾತ್ಕಾಲಿಕ ಪರಿಹಾರ ಕಾರ್ಯ ನಡೆಯುತ್ತಿದೆಯೆ?

ಶ್ರೀ ರಾಜವರ್ಧನ್.—ಅದು ಎಲ್ಲೂ ಮಾಡುತ್ತಾ ಇಲ್ಲ.

ಅಡಿಕೆ ಮೇಲೆ ಸರಕಾರ ಮತ್ತು ಮಾರಂಕಟ್ಟೆ ಸಮಿಂತಿಗಳಂ ವಿಧಿಸಿದ ಕರ

೧೪೧ (೨೫೪) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಡೆ (ಸಾಗರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಅಡಿಕೆ ಮೇಲೆ ಸರಕಾರದವರು ಮಾರುಕಟ್ಟೆ ಸಮಿತಿಗಳು ವಿಧಿಸಿದ ಕರ ಯಾ ಸೆಸ್ಸುಗಳ ಐದು ವರ್ಷದ ವಿವರಗಳನ್ನೊದಗಿಸುವುದು ಹಾಗೂ ಯಾವ ದರದಲ್ಲಿ ಆಯಾ ವರ್ಷಕ್ಕೆ ಒಟ್ಟು ವಸೂಲಾದ ಹಣ ಎಷ್ಟು?

ಆ) ಇಡೀ ರಾಜ್ಯಕ್ಕೆ ಒಂದೇ ಪ್ರಮಾಣವಲ್ಲಿ ವಿಧಿಸಲಾಗಿದೆಯೇ ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ವ್ಯತ್ಯಾಸವಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

(ಅ), ಆ) ವಿವರಗಳನ್ನು ಲಗತ್ತಿಸಿದ ಅನುಬಂಧದಲ್ಲಿ ಕೊಡಲಾಗಿದೆ.

(ಅ) ಅಡಿಕೆಯ ಮೇಲೆ ಕರ್ನಾಟಕ ರಾಜ್ಯದಲ್ಲಿ ವಸೂಲಾದ ಮಾರಾಟ ತೆರಿಗೆಯ ಮತ್ತು ಸೆಸ್ಸು ವಿವರಗಳು ಈ ಕೆಳಕಂಡಂತೆ ಇವೆ:—

ಕ್ರಮ ಸಂಖ್ಯೆ	ವರ್ಷ	ಮಾರಾಟ ತೆರಿಗೆ (ಲಕ್ಷ ರೂಪಾಯಿಗಳಲ್ಲಿ)	ಮಾರುಕಟ್ಟೆ ಸೆಸ್ಸುಗಳು (ಲಕ್ಷ ರೂಪಾಯಿಗಳಲ್ಲಿ)
೧.	೧೯೭೮–೭೯	೨೪೮.೭೭	೬೧.೧೧
೨.	೧೯೭೯–೮೦	೨೨೯.೯೯	೧೧೭.೮೦
೩.	೧೯೮೦–೮೧	೩೮೦.೬೭	೧೨೩.೧೨
೪.	೧೯೮೧–೮೨	೫೧೮.೭೦	೧೨೮.೦೪
೫.	೧೯೮೨–೮೩	೬೪೮.೦೦ (ಅಂದಾಜು)	೧೫೩.೮೩

ಕರ್ನಾಟಕ ಮಾರಾಟ ತೆರಿಗೆಯ ದರಗಳ ವಿವರಗಳು ಈ ಕೆಳಗಿನಂತಿದೆ.

(೧) ಕರ್ನಾಟಕ ಮಾರಾಟ ತೆರಿಗೆಯ ಅಧಿನಿಯಮ, ೧೯೫೭ ಮೇರೆಗೆ

	೧೯೭೮–೭೯	೧೯೭೯–೮೦	೧೯೮೦–೮೧	೧೯೮೧–೮೨	೧೯೮೨–೮೩
೧. ಕರ್ನಾಟಕ ಮಾರಾಟ ತೆರಿಗೆ	೩½%	೧೪–೩–೮೦ರವರೆಗೆ =೩ ೧/೨% ೧೫–೩–೮೦ರಿಂದ =೫%	೩೧–೭–೮೦ರವರೆಗೆ =೫% ೧–೮–೮೦ರಿಂದ =೪%	೪%	